"ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ ಡಾರ್ಲಿಂಗ್. ನಾನು ಹೇಗೂ ಕ್ಲಿನಿಕ್ಕಿಗೆ ಹೋಗುವ ದಾರಿಯೇ ಅದು. ಅದೆಷ್ಟೊತ್ತು? ನಾನೇ ಬಿಡಿಸಿಕೊಂಡು ಬರುತ್ತೇನೆ."

"ಸಿರಿಲ್... ನೀನು ಬೆಳಗ್ಗೆ ಹೋದರೆ ಬರುವುದು ರಾತ್ರಿ! ಅಲ್ಲಿವರೆಗೂ ನಾನು ಕಾದು ಕಾದು ಸತ್ತೇ ಹೋಗಿರುತ್ತೇನೆ! ಅದು ನನ್ನ ರಸೀದಿ. ನನಗೇ ಕೊಡು." ಮಿಸೆಸ್ ಬ್ರಿಗ್ಸ್ ರಾಗ ಎಳೆದಳು.

"ಅದು ನಿನ್ನದೇ ಮಾರಾಯ್ತೀ, ಯಾರು ಇಲ್ಲಾಂದ್ರು? ಅದನ್ನು ನೀನೇ ಇಟ್ಟುಕೋ. ನನಗೆ ಬೇಡ. ಬಿಡಿಸಿಕೊಂಡು ತರುತ್ತೇನೆ, ಅಷ್ಟೇ!"

"ನನಗೆ ಸಹಜ ಕುತೂಹಲ ಅಷ್ಟೇ ಸಿರಿಲ್."

"ನೋಡು ಡಾರ್ಲಿಂಗ್, ಹೆಚ್ಚಾಗಿ ಮಹಿಳೆಯರೇ ಗಿರವಿ ಇಡಲು ಹೋಗುವುದು. ಅದೂ ತಂತಮ್ಮ ಗಂಡಂದಿರ ವಸ್ತುಗಳನ್ನೇ! ವಾಚುಗಳು, ಶರ್ಟುಗಳ ಸ್ಟಡ್ಡುಗಳು, ಇಲ್ಲ ಅಂದ್ರೆ ಕೊನೆಗೆ ಕಫ್ ಲಿಂಕುಗಳು... ಮತ್ತಿನ್ನೇನು ಇರುತ್ತೆ?"

"ಅದು ಗಂಡಸರ ವಸ್ತುವಾದರೆ ನನಗೆ ಯಾಕೆ ಡಿಯರ್? ನಿನಗೇ ಕೊಡುತ್ತೇನೆ. ನಮ್ಮದಾದರೆ ನನಗೇ ಕೊಡಬೇಕು, ಸರೀನಾ?"

"ಆಯ್ತು ಮಾರಾಯ್ತಿ! ಇಲ್ಲಾಂದ್ರೆ ಒಂದು ಕೆಲಸ ಮಾಡು. ನನ್ನ ಜೊತೆ ಬಾ. ಇಬ್ಬರೂ ಹೋಗೋಣ. ಮಹಿಳೆಯರ ವಸ್ತುವಾದರೆ ನನಗೇಕೆ? ನೀನೇ ತಗಂಡು ಮನೆಗೆ ಬಾ. ಆಯ್ತಾ?"

'ಆಯ್ತು' ಎಂದು ಹೇಳಲು ಮಿಸೆಸ್ ಬ್ರಿಗ್ಸ್ ಬಾಯ್ದೆರೆದಿದ್ದಳು. ಅಷ್ಟರಲ್ಲಿ, ಒಂದು ವೇಳೆ ಗಿರವಿ ಅಂಗಡಿಯವನು ಗಂಡನ ಎದುರಿಗೆ ತನ್ನನ್ನು ಗುರುತು ಹಿಡಿದರೆ? ಎಂಬ ವಿಚಾರ ಅವಳಿಗೆ ಸುಳಿದು ತಣ್ಣಗಾದಳು.

"ಇಲ್ಲ, ಇಲ್ಲ ಸಿರಿಲ್ ನೀನೇ ಹೋಗು. ಕಾಯುವುದರಲ್ಲೂ ಒಂಥರ ಮಜ ಇರುತ್ತದೆ!"

"ಸರಿ ಹಾಗಾದರೆ. ಆ ವಸ್ತು ಏನಾದ್ರೂ ಐವತ್ತು ಡಾಲರುಗಳಿಗೆ ಲಾಯಕ್ಕಿಲ್ಲ ಎಂದಾದರೆ ನಾನು ಬಿಡಿಸಿಕೊಳ್ಳುವುದಿಲ್ಲ, ಆಯ್ತಾ?"

"ನೀನು ಈಗಷ್ಟೇ ಗಿರವಿ ಇಟ್ಟ ವಸ್ತು ರಸೀದಿಯಲ್ಲಿ ನಮೂದಿಸಿದಕ್ಕಿಂತ ಹತ್ತು ಪಟ್ಟು ಹೆಚ್ಚು ಬೆಲೆ ಬಾಳುತ್ತೆ ಎಂದಿದೆಯಲ್ಲ ಸಿರಿಲ್?"

"ಹಾಗೆಂದು ನಂಬಿದ್ದೇನೆ ಡಾರ್ಲಿಂಗ್. ಆದರೂ..."

ಹೇಗೂ ಸೋಮವಾರ ಉದಯಿಸಿತು. ಮಿಸೆಸ್ ಬ್ರಿಗ್ಸ್ ಆತುರಾತುರದಿಂದ ಬೆಳಗಿನ ಉಪಹಾರ ತಯಾರಿಸಿದಳು. ಗಂಡನಿಗೆ ಕೋಟು ಧರಿಸಲು ಸಹಾಯಕ್ಕೆ ನಿಂತಳು.

"ಜೋಪಾನ ಡಿಯರ್. ದುಡ್ಡಿಗಿಂತ ಆರೋಗ್ಯ ಮುಖ್ಯ. ಸಂಜೆ ಆರು ಗಂಟೆಯಷ್ಟೊತ್ತಿಗೆ ಮನೆಗೆ ಬರುತ್ತೀರ ತಾನೆ?"

"ಡೋಂಟ್ ವರಿ ಡಾರ್ಲಿಂಗ್. ಬಾಯ್!" ಎನ್ನುತ್ತಾ ಅವಳ ಗಂಡ ಹೊರಬಿದ್ದ.

"ಗಿರವಿ ಅಂಗಡಿಗೆ ಹೋಗುವುದಕ್ಕೆ ಮರೆಯಬೇಡಿ. ರಸೀದಿ ತೆಗೆದುಕೊಂಡಿದ್ದೀರಿ ತಾನೆ?"

"ಜೀಸಸ್! ಮರೆತೇ ಹೋಗಿದ್ದೆ!" ವೇಸ್ಟ್ ಕೋಟಿನಿಂದ ತಡಕಾಡುತ್ತಾ ಅವನು ರಸೀದಿಯನ್ನು ಹೊರತೆಗೆದ. "ಮೊದಲು ಅಲ್ಲಿಗೇ ಹೋಗುತ್ತೇನೆ."

"ಯಾವುದಕ್ಕೂ ನನಗೆ ಫೋನ್ ಮಾಡು ಡಿಯರ್. ನನ್ನಿಂದ ತಡೆದುಕೊಂಡು ಇರಲು ಸಾಧ್ಯವಾಗುತ್ತಿಲ್ಲ."

"ಆಯ್ತು ಮಾರಾಯ್ತಿ."

"ಆ ವಸ್ತು ನೀನೇ ಬಳಸುವಂಥದ್ದಾದರೆ ನನಗೆ ಅದಕ್ಕಿಂತ ಹೆಚ್ಚಿನ ಸಂತೋಷ ಇರಲಾರದು ಡಿಯರ್."